**ಎಸ್.ಸಿ.ಸಂಖ್ಯೆಃ 10035/2025**
**ಪ್ರಾ.ಸಾ.ಸಂಖ್ಯೆಃ 8**
**ಚಾ.ಸಾ.ಸಂಖ್ಯೆಃ 27**

**<u>ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ</u>**

**ಎಸ್.ಸಿ.ಸಂಖ್ಯೆಃ 10035/2025**

| | |
|---|---|
| ಹೆಸರುಃ | ಡಾ// ಶಕೀಲ ಮೊಮಿನ್ |
| ತಂದೆಯ ಹೆಸರುಃ | ಮೊಹಮ್ಮದ ಮೊಮಿನ್ |
| ವಯಸ್ಸುಃ | **49** ವರ್ಷ |
| ಉದ್ಯೋಗಃ | ಚಿಕ್ಕ ಮಕ್ಕಳ ತಜ್ಞರು, ಸರ್ಕಾರಿ ಆಸ್ಪತ್ರೆ, ಮುಧೋಳ |
| ವಾಸಃ | ಮುಧೋಳ |

**ಸಾಕ್ಷಿಯನ್ನು ದಿಃ 21.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-</u>**

ಕಳೆದ ಮೂರು ವರ್ಷಗಳಿಂದ ನಾನು ಮೇಲ್ಕಾಣಿಸಿದ ಹುದ್ದೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದೇನೆ.

**1.** ದಿ: **17.05.2023** ರಂದು ಗಾಯಾಳು ಮಹಾದೇವಿ ಕರಿಯಪ್ಪ ತಳವಾರ ಎನ್ನುವವರು ರಾತ್ರಿ **12-00** ಗಂಟೆಗೆ ಹಲ್ಲೆಯ ಪೂರ್ವ ಇತಿಹಾಸದೊಂದಿಗೆ ಚಿಕಿತ್ಸೆಗೆ ಹಾಜರಾಗಿದ್ದು, ನಾನು ದಿ: **18.05.2023** ರಂದು ಬೆಳಿಗ್ಗೆ **1-02** ನಿಮಿಷಕ್ಕೆ ಅವರನ್ನು ಪರಿಕ್ಷೆಗೆ ಒಳಪಡಿಸಿದ್ದು, ಅವರ ಹಣೆಯ ಬಲಭಾಗದಲ್ಲಿ **6X2** ಸೇ.ಮೀ. ಅಳತೆಯ ಆಳವಾದ ಕತ್ತರಿಸಿದ ಹರಿದ ರಕ್ತ ಹೆಪ್ಪುಗಟ್ಟಿದ ಗಾಯ ಕಂಡು ಬಂತು. ಚರ್ಮದ ಒಳಭಾಗದಲ್ಲಿ ರಕ್ತಸ್ರಾವಾಗಿದ್ದು, ಅದು ಕಣ್ಣಿನ ರೆಪ್ಪೆಯ ಒಳಗಡೆ ಇಳಿದಿತ್ತು.

**2.** ಮಿದುಳಿನ ಸಿಟಿ ಸ್ಕ್ಯಾನ ಮಾಡಿಸಲಾಗಿ ಮೇಲೆ ಹೇಳಿದ ಗಾಯಕ್ಕೆ ಅನುರೂಪವಾಗಿ ಬುರುಡೆಯ ಒಳಭಾಗ ಅಂದರೆ ಮಿದುಳಿನ ಹೊರಭಾಗದಲ್ಲಿ **Extra dural** ರಕ್ತ ಸ್ರಾವ ಆಗಿತ್ತು. ಅದರ ಅಳತೆ **2.8X0.6** ಸೇ.ಮಿ. ಇತ್ತು.

**3.** ಅದೇ ಗಾಯದ ಭಾಗದಲ್ಲಿ ತಲೆ ಬುರುಡೆಯ ಮೂಳೆ ಮುರಿತ ಇದ್ದು, ಅದು ಹುಬ್ಬಿನವರೆಗೂ ವಿಸ್ತರಿಸಿತ್ತು. ಕಣ್ಣಿನ ಕೆಳಭಾಗದ ಎಲುವು ಕೂಡ ಮುರಿದಿತ್ತು. ಬಲಭಾಗದ ಮೇಲ್ದವಡೆಯ ಮೇಲಿನ ಮ್ಯಾಕ್ಸಿಲರಿ ಸೈನಸ್ ಭಾಗದಲ್ಲಿ ಕೂಡ ಮೂಳೆ ಮುರಿತ ಇತ್ತು.

**ಎಸ್.ಸಿ.ಸಂಖ್ಯೆ: 10035/2025**
**ಪ್ರಾ.ಸಾ.ಸಂಖ್ಯೆ: 8**
**ಚಾ.ಸಾ.ಸಂಖ್ಯೆ: 27**

**4.** ನನ್ನ ಅಭಿಪ್ರಾಯದಲ್ಲಿ ಮೇಲ್ಕಾಣಿಸಿದ ಗಾಯ ತಿವ್ರಸ್ವರೂಪದ ಗಾಯ ಇದ್ದು, ಪರಿಕ್ಷೆಯ ನಿಕಟಪೂರ್ವ **6** ತಾಸುಗಳ ಅವಧಿಯಲ್ಲಿ ಆಗಿರಬಹುದಾದ ಸಾಧ್ಯತೆ ಇದೆ. ಸದರಿ ಗಾಯ ಮೊಂಡಾದ, ಒರಟಾದ ವಸ್ತುವಿನಿಂದ ಹೊಡೆದರೆ ಆಗಬಹುದಾಗಿದೆ. ಈಗ ನೋಡುತ್ತಿರುವ ಮುಮಾ-**2** ರಿಂದ ಹೊಡೆದಲ್ಲಿ ಸದರಿ ಗಾಯ ಆಗುವ ಸಾಧ್ಯತೆ ಇರುತ್ತದೆ. ಈ ಬಗ್ಗೆ ಈಗ ನಾನು ನೋಡುತ್ತಿರುವ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. **(**ಅದನ್ನು ನಿಪಿ-**23** ಅಂತ ಗುರುತಿಸಲಾಯಿತು**).**

**<u>ಪಾಟಿಸವಾಲು: 1 & 2 ನೇ ಆರೋಪಿ ಪರ ಶ್ರೀ.ಎ.ಎಸ್.ಎಸ್. ವಕೀಲರಿಂದ:</u>**

**1.** ಗಾಯಾಳುವನ್ನು ಅವರ ಸಂಬಂಧಿಕರು ಕರೆದುಕೊಂಡು ಬಂದಿದ್ದರು. ಸದರಿ ವ್ಯಕ್ತಿಯ ಹೆಸರನ್ನು ನಾನು ದಾಖಲಿಸಿಲ್ಲ. ಗಾಯಾಳುವಿಗೆ ನಾನೇ ಮೊದಲು ಚಿಕಿತ್ಸೆ ನೀಡಿರುತ್ತೇನೆ. ನಮ್ಮ ಆಸ್ಪತ್ರೆಯಲ್ಲಿ ಸ್ಕ್ಯಾನ ಮಾಡಿಸಿಲ್ಲ. ವೇದಾ ಸ್ಕ್ಯಾನ ಸೆಂಟರನಲ್ಲಿ ಸ್ಕ್ಯಾನ ಮಾಡಿಸಿರುತ್ತೇನೆ. ನಾನು **Extra durel** ಹ್ಯಾಮರೇಜ ಅಂತ ಹೇಳುವ ಗಾಯ ತಲೆ ಬುರುಡೆ ಮತ್ತು ಅದರ ಕೆಳಗೆ ಎಂದರೆ ಸರಿ. ಸದರಿ ಶಸ್ತ್ರ ಚಿಕಿತ್ಸೆ ಮಾಡಲು ನಮ್ಮಲ್ಲಿ ಲಭ್ಯವಿಲ್ಲದ ಕಾರಣ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಮೇಲ್ದರ್ಜೆಯ ಆಸ್ಪತ್ರೆಗೆ ಶಿಫಾರಸ್ಸು ಮಾಡಲಾಗಿತ್ತು. ಇಂತಹ ಗಾಯಗಳ ಸಂದರ್ಭದಲ್ಲಿ ಮಿದುಳು ಸ್ಥಾನಪಲ್ಲಟವಾಗುವ ಸಾಧ್ಯತೆ ಇದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದು ರಕ್ತಸ್ರಾವದ ಪ್ರಮಾಣಕ್ಕನುಗುಣವಾಗಿ ಸ್ಥಾನಪಲ್ಲಟವಾಗಬಹುದು ಎಂದು ನುಡಿಯುವರು.

**2.** ಈ ಪ್ರಕರಣದಲ್ಲಿಯ ಸ್ಕ್ಯಾನ ವರದಿಯಲ್ಲಿ ಸ್ಥಾನಪಲ್ಲಟವಾದ ಒಕ್ಕನಿಕೆ ಇರಲಿಲ್ಲ. ಮುಮಾ-**2** ರಿಂದ ಹೊಡೆದಲ್ಲಿ ಭಾರಿ ಪ್ರಮಾಣದಲ್ಲಿ ಗಾಯ ಆಗುವ ಸಾಧ್ಯತೆ ಇದೆ ಎಂದರೆ ಸರಿ. ಒಬ್ಬ ವ್ಯಕ್ತಿ ಎಡವಿ ಬಿದ್ದಲ್ಲಿ ಈ ತರಹದ ಗಾಯಗಳು ಆಗುವ ಸಾಧ್ಯತೆ ತುಂಬಾ ಕಡಿಮೆ ಇರುತ್ತವೆ. ಮುಮಾ-**2** ರಿಂದ ಹಲ್ಲೆ ಮಾಡಿದಲ್ಲಿ ಈ ತರಹದ ಗಾಯಗಳು ಆಗುವ ಸಾಧ್ಯತೆ ಇದೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಯಾಳು ಹಾಗೂ ಅವರ

**ಎಸ್.ಸಿ.ಸಂಖ್ಯೆಃ 10035/2025**
**ಪ್ರಾ.ಸಾ.ಸಂಖ್ಯೆಃ 8**
**ಚಾ.ಸಾ.ಸಂಖ್ಯೆಃ 27**

ಕುಟುಂಬದವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲು: 3 ರಿಂದ 5ನೇ ಆರೋಪಿ ಪರ ಶ್ರೀ.ಎಸ್.ಜಿ.ಸಿ. ವಕೀಲರಿಂದ:**

**1.** ಗಾಯಾಳು ಮಹಾದೇವಿ ಇವರಿಗೆ ನಾನು ನಿಪಿ-**23** ರಲ್ಲಿ ಕಾಣಿಸಿದ ಯಾವುದೇ ಗಾಯಗಳು ಆಗದೇ ಇದ್ದರೂ ಕೂಡ ಸುಳ್ಳು ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ. ದಿ: **18.05.2023** ರ ಸಮಯದಲ್ಲಿ ಕೋವಿಡ್ ಇತ್ತು ಎಂದರೆ ಸರಿಯಲ್ಲ. ಗಾಯಾಳು ಮಾನಸಿಕ ಅಸ್ವಸ್ಥಳಿದ್ದು, ಸ್ವತ: ಬಿದ್ದು ಗಾಯಗೊಂಡಿದ್ದಾಳೆ ಎಂದರೆ ಸರಿಯಲ್ಲ. ನಮ್ಮಲ್ಲಿ ಸಾಧ್ಯತೆ ಇದ್ದಲ್ಲಿ ನಾವು ಚಿಕಿತ್ಸೆ ನೀಡುತ್ತೇನೆ. ಹೆಚ್ಚಿನ ಚಿಕಿತ್ಸೆ ಅವಶ್ಯವಿದ್ದಲ್ಲಿ ಶಿಪಾರಸ್ಸು ಮಾಡುತ್ತೇವೆ. ಎಲ್ಲ ರೀತಿಯ ಚಿಕಿತ್ಸೆಯನ್ನು ನಮ್ಮ ಆಸ್ಪತ್ರೆಯಲ್ಲಿ ಮಾಡುವ ಸಲಕರಣೆಗಳು ಇವೆ ಎಂದರೆ ಸರಿಯಲ್ಲ. ಗಾಯಾಳು ಸ್ವತ: ಬಿದ್ದು ಗಾಯಗೊಂಡಿದ್ದರೂ ಕೂಡ ನಾನು ಗಾಯಾಳುವಿಗೆ ತೀವ್ರ ಸ್ವರೂಪದ ಗಾಯಗಳು ಆಗಿದ್ದವು ಅಂತ ಸುಳ್ಳು ಪ್ರಮಾಣ ಪತ್ರ ನೀಡಿ, ಸುಳ್ಳು ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**